ಪತ್ನಿ ಒಂದು ವಿಧದಲ್ಲಿ ಮಕ್ಕಳಂತೆ. ಚಂಡಿ ಹಿಡಿಯುವ ಚಾಳಿ. ಮೊದಲಿನಿಂದ ಕೊನೆಯವರೆಗೂ ಅವರಿಗೆ ಅಸಮಾಧಾನವಿದ್ದೇ ಇತ್ತು. ಒಂದನ್ನು ನೋಡಿದ ತಕ್ಷಣ ಬೇರೊಂದು ಬೇಕೆನಿಸುತ್ತಿತ್ತು. ಆದರೆ ಅದು ಏನು, ಹೇಗಿರಬೇಕು ಎಂದು ವಿವರಿಸಲಿಕ್ಕೆ ಆಗುತ್ತಿರಲಿಲ್ಲ. ಚೌಸೆಸ್ಕೋ ಏನೋ ಹೇಳುವವರಂತೆ ತನ್ನ ಕೈಗಳನ್ನು ಹಾರಿಸುತ್ತಿದ್ದರು. ಒಂದೊಂದು ಸಲ ಒಂದೇ ಒಂದು ಪದ ಅಷ್ಟೆ. ಅದನ್ನೆಲ್ಲವನ್ನೂ ಅರ್ಥ ಮಾಡಿಕೊಂಡು ಪೆಟ್ರೆಸ್ಕ್ಯೂ ತನ್ನ ಕೆಲಸವನ್ನು ಮುಂದುವರಿಸಿದ್ದಳು. ಒಂದು ನೂರು ವಾಸ್ತುಶಿಲ್ಪಿಗಳ ತಂಡದ ನಾಯಕಿಯಾಗಿದ್ದಳು ಮತ್ತು ಎಲ್ಲ ವಿನ್ಯಾಸಗಳ ಕೊನೆಯ ನಿರ್ಧಾರ ಅವಳದೇ ಆಗಿತ್ತು. ಆದರೆ ವಾಸ್ತವದಲ್ಲಿ ಅದು ನಮ್ಮ ನಾಯಕ, ನಾಯಕಿಯರದಾಗಿತ್ತು.

ಪ್ರಜೆಗಳ ಅರಮನೆಯ ಯೋಜನೆ ಬೃಹದಾಕಾರವಾಗಿ ಬೆಳೆಯುತ್ತಾ ಹೋಯಿತು. ಮಧ್ಯಮ ಗಾತ್ರದಲ್ಲಿ ಪ್ರಾರಂಭವಾಗಿದ್ದ ಅದು, ಎಲ್ಲ ಕಡೆಗಳಲ್ಲೂ ತನ್ನನ್ನು ವಿಸ್ತರಿಸಿಕೊಂಡಿತು. ಎತ್ತರ, ಉದ್ದ ಮತ್ತು ಅಗಲ. ಈಗ ಅದು ಯೂರೋಪಿನಲ್ಲಿಯೇ ಅತಿ ದೊಡ್ಡದಾದ ಆಡಳಿತ ಕಾರ್ಯನಿರ್ವಹಣಾ ಕಟ್ಟಡ. ಅಮೆರಿಕದ ಪೆಂಟಗನ್‌ಗಿಂತ ಸ್ವಲ್ಪ ಚಿಕ್ಕದು. ಹಾಂ. ಇದನ್ನೇ ಅಲ್ಲವೇ ಚೌಸೆಸ್ಕೋ ಬಯಸಿದ್ದು.

ದೊಡ್ಡದು ಎಂದರೆ ದೊಡ್ಡದೇ. ಇನ್ನೂರ ಎಪ್ಪತ್ತು ಮೀಟರ್ ಒಂದು ಬದಿಯಲ್ಲಿ. ಇನ್ನೂರ ನಲವತ್ತು ಇನ್ನೊಂದು ಬದಿ. ಎಂಬತ್ತಾರು ಮೀಟರ್ ಎತ್ತರ. ತೊಂಬತ್ತೆರಡು ಮೀಟರ್ ಭೂಮಿಯ ಒಳಗೆ. ಐದು ಸಾವಿರದ ಒಂದು ನೂರು ಕೋಣೆಗಳು, ಇಪ್ಪತ್ತನಾಲ್ಕು ಅಂತಸ್ತು. ಕಿಲೋಮೀಟರ್‌ಗಟ್ಟಲೆ ಇರುವ ಓಣಿಗಳು. ಭೂಮಿಯ ಒಳಗೆ ನಾಲ್ಕು ಅಂತಸ್ತಿನ ಬಂಕರ್, ಸುರಂಗಗಳ ಜಾಲ ಮತ್ತು ಒಂದು ಖಾಸಗಿ ಮೆಟ್ರೊ ರೈಲು. ನಮ್ಮ ಸರ್ವಾಧಿಕಾರಿ ಎಲ್ಲಾ ಆಡಳಿತ ಕಾರ್ಯನಿರ್ವಹಣಾ ಸಿಬ್ಬಂದಿಯನ್ನು ಒಳಗಿನಿಂದಲೇ ಭೇಟಿ ಮಾಡಿ, ನಗರದಿಂದ ಹೊರಗೆ ಹೋಗಬಹುದಾದ ವ್ಯವಸ್ಥೆ. ಆಕಸ್ಮಾತ್ ದಂಗೆಯಾದಲ್ಲಿ ಪರಾರಿಯಾಗಲೂ ಸಹ. ಹಾಂ. ದಂಗೆಯಾದಾಗ ಅದೃಷ್ಟ ಅವರ ಕೈಯಲ್ಲಿದ್ದರೆ ಮಾತ್ರ ಪರಾರಿಯಾಗಬಹುದು.

ಈ ಪ್ರಜೆಗಳ ಅರಮನೆಯನ್ನು ಆಗಾಗ ವಿದ್ಯುದ್ದೀಪದಿಂದ ಅಲಂಕರಿಸುವುದಿದೆ. ಆಗ ಅದು ಗಂಧರ್ವಲೋಕದಿಂದ ಬಂದ ನೌಕೆಯ ತರಹ ಕಾಣಿಸುತ್ತದೆ. ಆದರೆ ಬೆಳಗಿನಲ್ಲಿ, ನಗರದ ಮಾಂಸ, ಮಜ್ಜೆಗಳನ್ನು ತಿಂದು ಕೊಬ್ಬಿದ ಒಂದು ಬೃಹತ್ ಆಕ್ಟೋಪಸ್, ಆ ಅರಮನೆಯಿಂದ ಹೊರಡುವ ಅಸಂಖ್ಯ ರಸ್ತೆಗಳು ಆಕ್ಟೋಪಸ್‌ನ ಕೈಕಾಲುಗಳು. ಆ ರಸ್ತೆಗಳ ಎರಡು ಬದಿಯಲ್ಲಿ ಇರುವ ಸಣ್ಣ ಸಣ್ಣ ಮನೆಗಳ ಕಪ್ಪು ಕಿಟಕಿಗಳು ಆಕ್ಟೋಪಸ್‌ನ ಮೇಲೆ ಕಾಣುವ ಕಪ್ಪು ಚುಕ್ಕೆಗಳಂತೆ.

ಇಷ್ಟೆಲ್ಲ ಅಗಾಧತೆಯನ್ನು ತನ್ನೊಳಗಿಸಿಕೊಂಡಿದ್ದರೂ, ಬಹಳಷ್ಟು ರೊಮೇನಿಯನ್ನರಿಗೆ ಈ ಅರಮನೆ ಕಾಣುವುದಿಲ್ಲ. ಬುಖಾರೆಸ್ಟಿನಿಂದ ಬಹುದೂರದವರೆಗೆ ಇದನ್ನು ಕಾಣಬಹುದಾದರೂ, ಈ ನಗರದ ಜನ ಅದನ್ನು ತಮ್ಮ ಜೀವನದ ಒಂದು ಭಾಗವಾಗಿ ಇನ್ನೂ ನೋಡಹತ್ತಿಲ್ಲ.

ಕಣ್ಗಾವಲು ಕ್ಯಾಮೆರಾಗಳನ್ನು ಮಾರಾಟ ಮಾಡುವ ಕಂಪೆನಿಯಲ್ಲಿ ಕೆಲಸ ಮಾಡುತ್ತಿರುವ ಐವತ್ತೆಂಟು ವರ್ಷದ ಮೇರಿಯಾ ಪೆಪೆಸ್ಕೋ ಹೇಳುತ್ತಾರೆ, 'ನಾನಿನ್ನೂ ಅದನ್ನು ನೋಡಲಿಲ್ಲ ಮತ್ತು ನೋಡುವುದೂ ಇಲ್ಲ.' ಅವರು ಅದನ್ನು ವಿವರಿಸಲು ಇನ್ನೊಂದು ಪದವನ್ನು ಬಳಸಿದರು ಮತ್ತು ನನ್ನ ಲೇಖನದಲ್ಲಿ ಅದನ್ನು ಬಳಸಬೇಡಿ ಎಂದೂ ಹೇಳಿದರು... 'ನನಗೆ ಆತನನ್ನು ಕಂಡರೆ ದ್ವೇಷ ಮತ್ತು ಅವನು ಇದ್ದ ವ್ಯವಸ್ಥೆ ಕೂಡ. ಆ ಉದ್ಯಾನವಿದೆಯಲ್ಲ, ಅದು ಮೊದಲು ಒಂದು ಬೃಹತ್ ಸೆರೆಮನೆಯಾಗಿತ್ತಂತೆ. ನಾನು ಅಲ್ಲಿ ನಡೆಯುವುದಕ್ಕೂ ಇಷ್ಟಪಡುವುದಿಲ್ಲ.